# ವಿಂಡೋಸ್ 7 ಬಳಕೆದಾರರೇ ಎಚ್ಚರ!

ವಿಂಡೋಸ್ 7 ಆಪರೇಟಿಂಗ್ ಸಿಸ್ಟಂಗೆ ಮೈಕ್ರೋಸಾಫ್ಟ್ ಕೊನೆ ಮೊಳೆ ಹೊಡೆಯುವ ಕಾಲ ಸನ್ನಿಹಿತಗೊಂಡಿದೆ. ಹೀಗಾಗಿ, ಅದರ ಮುನ್ನೆಚ್ಚರಿಕೆ ಎಂಬಂತೆ ಈಚೆಗೆ ವಿಂಡೋಸ್ 7 ಆಪರೇಟಿಂಗ್ ಸಿಸ್ಟಂಗೆ ನೀಡುವ ಬೆಂಬಲವನ್ನು ಅದು ವಾಪಾಸ್ ಪಡೆದಿದೆ.

■ **ಶಶಿಕುಮಾರ್ ಸಿ.**

ವಿಂಡೋಸ್ 7 ಆಪರೇಟಿಂಗ್ ಸಿಸ್ಟಂಗೆ (ಓಎಸ್) 2020ರ ಜನವರಿ 14ರಿಂದ ತನ್ನ ಸಪೋರ್ಟ್ (ತಾಂತ್ರಿಕ ಸಮಸ್ಯೆಗಳಿಗೆ ಬೆಂಬಲ) ನೀಡುವುದನ್ನು ಸಾಫ್ಟ್‌ವೇರ್ ದೈತ್ಯ ಕಂಪನಿಯಾದ ಮೈಕ್ರೊಸಾಫ್ಟ್ ಸ್ಥಗಿತಗೊಳಿಸಲಿದೆ. ಈ ವಿಚಾರ ಹೊರ ಬೀಳುತ್ತಿದ್ದಂತೆ ಭಾರತದ ಕಂಪ್ಯೂಟರ್ ಹಾಗೂ ಲ್ಯಾಪ್‌ಟಾಪ್ ಬಳಕೆದಾರರ ವಲಯದಲ್ಲಿ ಚರ್ಚೆ ಶುರುವಾಗಿದ್ದು, ವಿಂಡೋಸ್ 7 ಸ್ಥಗಿತಗೊಂಡರೆ ಮುಂದೇನು ಗತಿ ಎಂದು ಬಾಯಿ ಮೇಲೆ ಬೆರಳಿಡುತ್ತಿದ್ದಾರೆ.

ದೇಶದಲ್ಲಿ ಶೇ. 41ರಷ್ಟು ಕಂಪ್ಯೂಟರ್‌ಗಳು ಹಾಗೂ ಲ್ಯಾಪ್‌ಟಾಪ್‌ಗಳು ಈಗಲೂ ವಿಂಡೋಸ್ 7 ಆಪರೇಟಿಂಗ್ ಸಿಸ್ಟಂನಿಂದಲೇ ಕಾರ್ಯನಿರ್ವಹಿಸುತ್ತಿವೆ ಎನ್ನಲಾಗಿದೆ. ವಿಂಡೋಸ್ 7ಗೆ ಮೈಕ್ರೊಸಾಫ್ಟ್ ತನ್ನ ಬೆಂಬಲ ಸ್ಥಗಿತಗೊಳಿಸಿದರೆ ಆ ಆಪರೇಟಿಂಗ್ ಸಿಸ್ಟಂನ ಬಳಕೆಯ ಕಂಪ್ಯೂಟರ್ ಹಾಗೂ ಲ್ಯಾಪ್‌ಟಾಪ್‌ಗಳಲ್ಲಿ ಸೈಬರ್ ಸೆಕ್ಯುರಿಟಿ ಸಮಸ್ಯೆ ತಲೆದೋರಲಿದೆ. ಕಸ್ಟಮರ್ ಸಪೋರ್ಟ್ ಸಹ ರದ್ದಾಗುತ್ತದೆ. ಸಾಫ್ಟ್‌ವೇರ್ ಅಪ್‌ಡೇಟ್ ಮಾಡದಿದ್ದರೆ ನಿಮ್ಮ ಕಂಪ್ಯೂಟರ್‌ಗೆ ವೈರಸ್ ದಾಳಿಯಾಗುವ ಸಾಧ್ಯತೆ ಹೆಚ್ಚು ಇದೆ ಎನ್ನುವ ಮಾತುಗಳು ಟೆಕ್ ವಲಯದಲ್ಲಿ ಕೇಳಿ ಬರುತ್ತಿದೆ.

ಜನವರಿ 14ರ ನಂತರ ವಿಂಡೋಸ್ 7ಗೆ ಮೈಕ್ರೊಸಾಫ್ಟ್ ಸಪೋರ್ಟ್ ಸ್ಥಗಿತವಾದರೂ, ಬಳಕೆದಾರರ ಕಂಪ್ಯೂಟರ್ ಹಾಗೂ ಲ್ಯಾಪ್‌ಟಾಪ್‌ಗಳ ಕಾರ್ಯಾಚರಣೆ ಸ್ಥಗಿತವಾಗದು. ಒಂದು ವೇಳೆ ಅವುಗಳಲ್ಲಿ ಯಾವುದಾದರೂ ತಾಂತ್ರಿಕ ಅಡಚಣೆಗಳು ಎದುರಾದರೆ, ಆ ಅಡಚಣೆಗಳಿಗೆ ಪರಿಹಾರ ಕಲ್ಪಿಸುವ ಬೆಂಬಲವನ್ನು ಮೈಕ್ರೊಸಾಫ್ಟ್ ಹಿಂಪಡೆದಿದೆ. ಸಾಫ್ಟ್‌ವೇರ್ ಸಹ ಅಪ್‌ಡೇಟ್ ಆಗುವುದಿಲ್ಲ. ಕಾಲಕಾಲಕ್ಕೆ ಸೆಕ್ಯುರಿಟಿ ಅಪ್‌ಡೇಟ್ ಸಹ ಲಭ್ಯವಾಗದು.

ಜನವರಿ 14ರ ನಂತರವೂ ಸಾಫ್ಟ್‌ವೇರ್ ಮತ್ತು ಸೆಕ್ಯುರಿಟಿ ಅಪ್‌ಡೇಟ್ ಮಾಡದೆ ಬಳಸಿದರೆ ವೈರಸ್ ದಾಳಿಗೆ ಸುಲಭವಾಗಿ ಕಂಪ್ಯೂಟರ್ ಸಿಲುಕುವ ಸಾಧ್ಯತೆ ಇದೆ. ತೀರಾ ಹಳೆಯ ಕಂಪ್ಯೂಟರ್‌ಗಳು ವಿಂಡೋಸ್ 10 ಸಿಸ್ಟಂ ಜೊತೆಗೆ ಸರಿಯಾಗಿ ಕಾರ್ಯ ನಿರ್ವಹಿಸದು. ಅಂತಹ ಸಂದರ್ಭದಲ್ಲಿ ಹೊಸ ಪಿಸಿ ತೆಗೆದುಕೊಳ್ಳಲೇಬೇಕಾಗಬಹುದು.

ಒಂದು ವೇಳೆ ಪೈರಸಿ ಆಪರೇಟಿಂಗ್ ಸಿಸ್ಟಂ ಹೊಂದಿದ್ದರೂ ಸಮಸ್ಯೆ ತಪ್ಪಿದ್ದಲ್ಲ. 2014ರ ಏಪ್ರಿಲ್ 8ರಂದೇ ವಿಂಡೋಸ್ ಎಕ್ಸ್‌ಪಿಗೆ ತನ್ನ ಬೆಂಬಲವನ್ನು ಮೈಕ್ರೊಸಾಫ್ಟ್ ನಿಲ್ಲಿಸಿತ್ತು. ಆದರೂ, ಸಾಕಷ್ಟು ಮಂದಿ ಇನ್ನೂ ಅದೇ ಆಪರೇಟಿಂಗ್ ಸಿಸ್ಟಂ ಅನ್ನು ಬಳಸುತ್ತಿದ್ದಾರೆ. ಆ ಓಎಸ್ ಸೇರಿದಂತೆ ವಿಂಡೋಸ್ ಎಕ್ಸ್‌ಪಿ ಇರುವ ಕಂಪ್ಯೂಟರ್ ಹಾಗೂ ಲ್ಯಾಪ್‌ಟಾಪ್‌ಗೆ ಸೈಬರ್ ದಾಳಿ ಆತಂಕ ತಪ್ಪಿದ್ದಲ್ಲ.

ಬಳಕೆದಾರರಿಗೆ ನೆರವಾಗಿ ಮುಂದಾಗಿರುವ ಮೈಕ್ರೊಸಾಫ್ಟ್ ವಿಂಡೋಸ್ 7 ನಿಂದ ವಿಂಡೋಸ್ 10ಕ್ಕೆ ತಮ್ಮ ಓಎಸ್ ಸಾಫ್ಟ್‌ವೇರ್ ಅನ್ನು ಅಪ್‌ಡೇಟ್ ಮಾಡಿಕೊಳ್ಳುವಂತೆ ಮನವಿ ಮಾಡಿದೆ. ಹಳೆಯ ಕಂಪ್ಯೂಟರ್‌ಗಳು ಹಾಗೂ ಲ್ಯಾಪ್‌ಟಾಪ್‌ಗಳಲ್ಲಿ ವಿಂಡೋಸ್ 10 ಅನ್ನು ಅಪ್‌ಡೇಟ್ ಮಾಡಬಹುದು.

ಲೈಸೆನ್ಸ್‌ವುಳ್ಳ ಓಎಸ್ ಸಿಸ್ಟಂ ಹೊಂದಿದ್ದರೆ ಉಚಿತವಾಗಿ ವಿಂಡೋಸ್ 10ಗೆ ಓಎಸ್ ಅನ್ನು ಅಪ್‌ಡೇಟ್ ಮಾಡಬಹುದು. ಲೈಸೆನ್ಸ್ ಇಲ್ಲವಾದರೆ, ವಿಂಡೋಸ್ 10 ಅನ್ನು ₹8 ಸಾವಿರದಿಂದ ₹9 ಸಾವಿರ ಪಾವತಿಸಿ ಖರೀದಿಸಬೇಕು. ವಿಂಡೋಸ್ 7 ಓಎಸ್ ಬಳಕೆಗೆ ಬಂದು ಹತ್ತು ವರ್ಷಗಳಾಗಿದೆ. 2009ರಲ್ಲಿ ಇದು ಬಿಡುಗಡೆಯಾಗಿತ್ತು. ■

# ವಾಟ್ಸ್‌ಆ್ಯಪ್‌ನಲ್ಲೂ ಡಾರ್ಕ್ ಥೀಮ್!

ಸದ್ಯ ಚಾಲ್ತಿಯಲ್ಲಿರುವ ಎಲ್ಲ ಆ್ಯಪ್‌ಗಳು ಡಾರ್ಕ್ ಥೀಮ್ ಕಾನ್ಸೆಪ್ಟ್ ಒಪ್ಪಿಕೊಂಡು ಅದನ್ನು ತನ್ನಲ್ಲಿ ಅಳವಡಿಸಿಕೊಳ್ಳತೊಡಗಿವೆ. ಅದೇ ಹಾದಿಯನ್ನು ಸದ್ಯ ವಾಟ್ಸ್‌ಆ್ಯಪ್ ಸಹ ಹಿಡಿದಿದೆ.

ಮೆಸೇಜಿಂಗ್ ಸೇವೆಯಲ್ಲಿ ಸದ್ಯ ಮುಂಚೂಣಿಯಲ್ಲಿರುವ ವಾಟ್ಸ್‌ಆ್ಯಪ್, ಕೆಲ ದಿನಗಳಲ್ಲಿಯೇ ತನ್ನ ಹೊಸ ಆವೃತ್ತಿಯಲ್ಲಿ ಡಾರ್ಕ್ ಥೀಮ್ ಅಥವಾ ಡಾರ್ಕ್ ಮೋಡ್ ಫೀಚರ್ ಅನ್ನು ಪರಿಚಯಿಸಲಿದೆ. ಈ ಬಗ್ಗೆ ವಾಟ್ಸ್‌ಆ್ಯಪ್ ಅಧಿಕೃತ ಮಾಹಿತಿಯನ್ನು ಹೊರಹಾಕಿದೆ. ಆ್ಯಂಡ್ರಾಯ್ಡ್ 10 ಮತ್ತು ಐಓಎಸ್ 13ನಲ್ಲಿ ಡಾರ್ಕ್ ಥೀಮ್ ಬಳಕೆಯಲ್ಲಿದೆ. ಅದಕ್ಕೆ ಪೂರಕವಾಗಿ ವಾಟ್ಸ್‌ಆ್ಯಪ್ ಡಾರ್ಕ್ ಮೋಡ್ ತರುತ್ತಿದೆ.

ಡಾರ್ಕ್ ಥೀಮ್‌ನ ವಿಶೇಷತೆ ಬಗ್ಗೆ ನೋಡುವುದಾದರೆ, ಬ್ಯಾಟರಿ ಉಳಿತಾಯ ಮತ್ತು ಮೊಬೈಲ್ ಬಳಕೆಯಿಂದ ಕಣ್ಣಿಗೆ ಹೆಚ್ಚಾಗಿ ಹಾನಿಯಾಗದ ರೀತಿ ಇದು ಕಾರ್ಯ ನಿರ್ವಹಿಸಲಿದೆ. ಇದೇ ಕಾರಣಕ್ಕೆ ಬಳಕೆದಾರರು ಡಾರ್ಕ್ ಮೋಡ್‌ನತ್ತ ಮುಖ ಮಾಡುತ್ತಿರುವುದು. ಈ ಬಗ್ಗೆ ಪ್ರತಿಕ್ರಿಯಿಸಿರುವ ವಾಟ್ಸ್‌ಆ್ಯಪ್, ತನ್ನ ಬ್ಲಾಗ್‌ನಲ್ಲಿ 'ಬೀಟಾ ಆವೃತ್ತಿ ಪರಿಶೀಲನೆಯಲ್ಲಿದ್ದು, ಮೊದಲಿಗೆ ಆ್ಯಂಡ್ರಾಯ್ಡ್ ಆವೃತ್ತಿಯಲ್ಲಿ ಡಾರ್ಕ್ ಮೋಡ್ ದೊರೆಯಲಿದೆ' ಎಂದು ತಿಳಿಸಿದೆ.

ವಾಟ್ಸ್‌ಆ್ಯಪ್ ಅಪ್‌ಡೇಟ್ ಮತ್ತು ಬೀಟಾ ಆವೃತ್ತಿ ಕುರಿತು ಈಗಾಗಲೇ ವಾಬೀಟಾ ಇನ್ಫೋ ಮಾಹಿತಿ ಹೊರಹಾಕಿದೆ. ಅದರ ಪ್ರಕಾರ ಡಾರ್ಕ್ ಡಿಫಾಲ್ಟ್ ವಾಲ್‌ಪೇಪರ್ ಸಹ ಹೊಸ ಆವೃತ್ತಿಯಲ್ಲಿ ಲಭ್ಯವಾಗಲಿದೆ. ಬ್ಯಾಕ್‌ಗ್ರೌಂಡ್ ಮಾತ್ರವಲ್ಲದೆ, ಟೆಕ್ಸ್ಟ್ ಕೂಡ ಡಾರ್ಕ್ ಮೋಡ್‌ನಲ್ಲೇ ಲಭ್ಯವಾಗಲಿರುವುದು ವಿಶೇಷ. ಡಾರ್ಕ್ ಥೀಮ್ ಬಗ್ಗೆ ಕಳೆದ ಒಂದು ವರ್ಷದಿಂದ ಕಾರ್ಯೋನ್ಮುಖವಾಗಿರುವ ವಾಟ್ಸ್‌ಆ್ಯಪ್ ಸದ್ಯದಲ್ಲೇ ಅದನ್ನು ಚಾಲ್ತಿಗೆ ತರಲಿದೆ ಎನ್ನಲಾಗಿದೆ. ~ ■